ಸಾಕ್ಷಿಯನ್ನು ದಿನಾಂಕ 28/06/2017 ರಂದು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು
ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಬಿಡಿಪಿ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿರುತ್ತವೆ ಹಾಗೂ ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ಹೇಳಿ ಕೇಳಿ ಸಹಿ ಮಾಡಿರುತ್ತೇನೆ. ಅದನ್ನು ನಾನು ಹೇಳಿದಂತೆ ತಯಾರಿಸಲಾಗಿದೆ.

ನಾನು ಕಬ್ಬೂರು ಗ್ರಾಮದ ಸರ್ವೆ ನಂ. 110/3ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 1 ಎಂದು ಗುರ್ತಿಸಲಾಯಿತು. ಅದೇ ರೀತಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ, ಚಿಕ್ಕೋಡಿ ಇವರಿಗೆ ಅರ್ಜಿಯ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 2 ಎಂದು ಗುರ್ತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಒಟ್ಟು 6 ಪೋಟೊಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ 3 ರಿಂದ 8 ಎಂದು ಮತ್ತು ಅದರ ಸಿ.ಡಿಯನ್ನು ನಿಪಿಃ 9 ಎಂದು ಗುರ್ತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಆದೇಶವಾಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಅದೆ.

(ಶ್ರೀ. ಆನಂದ.ಎಮ್.)
1ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು,
ಚಿಕ್ಕೋಡಿ.